ಶ್ರೀಕೃಷ್ಣ ನಾಮದ ಮಹತ್ವವನ್ನು ಎಷ್ಟು ಕೊಂಡಾಡಿದರೂ ಸಾಲದು ಶ್ರೀವ್ಯಾಸರಾಯರಿಗೆ.

**ನಿನ್ನವನೆಂದರೆ ತನ್ನನೀವ ಕೃಷ್ಣ**
**ಕೃಷ್ಣ ಕೃಷ್ಣ ಎಂಬುದು ಭವರೋಗಹರವಾದೊಂದೌಷಧ**

**ನಮೋ ನಮೋ ಸಿರಿಕೃಷ್ಣ ಎಂಬ ಘೋಷ**
**ಮುಕುತಿಕನ್ನಿಕೆಯ ಮದುವೆಯ ವಾದ್ಯಘೋಷ**

ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ಈ ಪ್ರಕಾರವಲ್ಲಿ ಸಾಮಾನ್ಯರಿಗೆ ಹರಿದಾಸರಾಗಿ, ಯತಿರಾಜರಾಗಿ, ರಾಜಗುರುಗಳಾಗಿ, ಉನ್ನತ ಪಂಡಿತರಾಗಿ, ಕವಿಯಾಗಿ – ಎಲ್ಲದರಲ್ಲಿಯೂ ಸೈ ಎನಿಸಿಕೊಂಡು, ಕನ್ನಡದ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದವರು, ಶ್ರೀವ್ಯಾಸರಾಯರು. ಭಗವಂತನಿಗೆ ಅವರು ಮೊರೆಯಿಡುವ ಈ ಕೀರ್ತನೆ ಅವರ ಭಗವದ್ಭಕ್ತಿಗೆ ಉತ್ತಮ ನಿದರ್ಶನ.

**ಆಸೆಯೆಂಬುದು ಆರ್ಜ ಲೋಕಕ್ಕೆ ಮುಟ್ಟುತಿದೆ**
**ಕಾಸು ಹೋದರೆ ಕ್ಲೇಶವಾಗುತ್ತಿದೆ**
**ಮೋಸ ಮಾಡಿ ಮೃತ್ಯು ಬಾಹೋದು ನಾನರಿಯೆ**
**ವಾಸುದೇವನೆ ಎನ್ನ ದಯಮಾಡಿ ಸಲಹೋ**

## ದಿವ್ಯಸ್ಮೃತಿಪ್ರಭ

ಸ್ವಾಮಿ ತ್ರಿಗುಣಾತೀತಾನಂದರು ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರು. ಇನ್ನೊಬ್ಬ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ಪ್ರೇಮಾನಂದರ ತಾಯಿ ಮೂರು ಜನ ಸಾಧುಗಳನ್ನು ತಮ್ಮ ಮನೆಗೆ ಊಟಕ್ಕೆ ಕರೆದಿದ್ದರು. ಕಾರಣಾಂತರದಿಂದ ಸ್ವಾಮಿ ತ್ರಿಗುಣಾತೀತಾನಂದರೊಬ್ಬರೇ ಅವರ ಮನೆಗೆ ಹೋಗಬೇಕಾಯಿತು. ಮೂರು ಜನರಿಗೆ ಮಾಡಿದ್ದ ಅಡಿಗೆಯನ್ನು ಏನು ತಾನೆ ಮಾಡಬೇಕು? ಕರೆದಿದ್ದವರಿಗೆ ಅಸಮಾಧಾನವಾಯಿತು. ಆದರೆ ಸ್ವಾಮಿ ತ್ರಿಗುಣಾತೀತಾನಂದರೇ ಮೂರು ಜನಕ್ಕೆ ಮಾಡಿದ ಅಡಿಗೆಯನ್ನೂ ತಾವೇ ನಿಧಾನವಾಗಿ ಉಂಡರು. ಮನೆಯವರಿಗೆ ಗಾಬರಿ. ಮಾರನೆಯ ದಿನವೂ ಅವರು ಆರೋಗ್ಯವಾಗಿ ಓಡಾಡಿಕೊಂಡಿದ್ದನ್ನು ಕಂಡಮೇಲೆಯೆ ಸಮಾಧಾನ!

***

ಇನ್ನೊಮ್ಮೆ ಸ್ವಾಮಿ ತ್ರಿಗುಣಾತೀತಾನಂದರು ಬೇಲೂರು ಮಠದಲ್ಲಿದ್ದರು. ದಿನಕ್ಕೆ ಒಂದು ಬಾಳೆಹಣ್ಣನ್ನು ತಿಂದುಕೊಂಡು, ಅಲ್ಲಿನ ಬಿಲ್ವಮರದ ಕೆಳಗೆ ಕುಳಿತುಕೊಂಡು, ತಪಸ್ಸನ್ನಾಚರಿಸುತ್ತಿದ್ದರು. ಮತ್ತೊಮ್ಮೆ ಏಳೂವರೆ ಸೇರು ಹಾಲನ್ನು ಕಾಯಿಸಿ ತಾವೊಬ್ಬರೇ ಕುಡಿದರು! ಇನ್ನೊಮ್ಮೆ ದಿನಕ್ಕೆ ಕೇವಲ ಎರಡು ಅಕ್ಕಿಕಾಳುಗಳು ಮತ್ತು ಒಂದೆರಡು ಮೆಣಸಿನ ಕಾಯಿಗಳನ್ನು ತಿಂದೇ ತಿಂಗಳೆಲ್ಲಾ ಕಳೆದಿದ್ದರು!

***

೧೮೯೯ ರಲ್ಲಿ ಸ್ವಾಮಿ ವಿವೇಕಾನಂದರ ಆಣತಿಯ ಮೇರೆಗೆ ಸ್ವಾಮಿ ತ್ರಿಗುಣಾತೀತಾನಂದರು 'ಉದ್ಬೋಧನ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಅದಕ್ಕೆ ಅವರೇ ಸಂಪಾದಕರು, ನಿರ್ವಾಹಕರು, ಮುದ್ರಣಾಲಯದ ವ್ಯವಸ್ಥಾಪಕರು ಎಲ್ಲಾ. ಅದಲ್ಲದೆ, ಚಂದಾಹಣವನ್ನು ಮತ್ತು ಲೇಖನಗಳನ್ನು ಸಂಗ್ರಹಿಸಲೂ ಅವರೇ ಮನೆಯಿಂದ ಮನೆಗೆ ನಡೆದುಹೋಗುತ್ತಿದ್ದರು, ಅದೂ ಮೈಲುಗಟ್ಟಲೆ. ಆಗ ಅವರು ದಿನಕ್ಕೆ ಒಂದು ಗಂಟೆ ಕಾಲ ಮಾತ್ರ ನಿದ್ರೆ ಮಾಡುತ್ತಿದ್ದರಂತೆ! ನಿದ್ರೆ ಬಾರದಂತೆ ಮಾಡಲು, ಕಣ್ಣಿಗೆ ತಣ್ಣೀರು ಎರಚಿಕೊಂಡು ರಾತ್ರಿಯೆಲ್ಲಾ ಕರಡಚ್ಚುಗಳನ್ನು ನೋಡುತ್ತಿದ್ದರು. ನಿಜಕ್ಕೂ ಇವರದು ಅತಿಮಾನುಷ ಶಕ್ತಿ!

***

ಸ್ವಾಮಿ ನಿರಂಜನಾನಂದರು ಶ್ರೀರಾಮಕೃಷ್ಣರ ಇನ್ನೊಬ್ಬ ಪ್ರತ್ಯಕ್ಷಶಿಷ್ಯರು. ಒಂದು ದಿನ ಅವರು ಶ್ರೀರಾಮಕೃಷ್ಣರಿಗೆ ನಿವೇದಿಸಲು ಸಿಹಿ ತಿಂಡಿಗಳನ್ನು ಖರೀದಿಸಿಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ಒಬ್ಬಳು ಬಡವೆ ಹೆಂಗಸನ್ನು ಕಂಡರು. ಅವಳು ಒಂದು ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದಳು. ಮಗು ಸ್ವಾಮಿಗಳ ಕೈಯಲ್ಲಿದ್ದ ಸಿಹಿತಿಂಡಿಗಳ ಪೊಟ್ಟಣವನ್ನು ನೋಡಿತು; ತನಗೂ ಬೇಕೆಂದು ಅಳತೊಡಗಿತು. ತಾಯಿ ಎಷ್ಟು ಸಮಾಧಾನ ಮಾಡಿದರೂ, ಮಗುವಿನ ಅಳು ಹೆಚ್ಚುತ್ತಲೇ ಹೋಯಿತು. ನಿರಂಜನಾನಂದರು ಆ ಮಗುವಿನ ಬಳಿ ಹೋಗಿ, ಆನಂದದಿಂದ ತಮ್ಮ ಕೈಯಲ್ಲಿ ಇರುವುದನ್ನೆಲ್ಲಾ, ಆ ಮಗುವಿಗೆ ಕೊಟ್ಟುಬಿಟ್ಟರು. ದೇವರಿಗೆ ತೆಗೆದುಕೊಂಡು ಹೋಗುತ್ತಿರುವ ಸಿಹಿತಿಂಡಿಗಳನ್ನು ತಿಂದರೆ, ತನ್ನ ಮಗುವಿಗೆ ಒಳ್ಳೆಯದಾಗುವುದಿಲ್ಲವೆಂದು ತಾಯಿ ಪ್ರತಿಭಟಿಸಿದಳು. ಆದರೂ ಕೇಳದೆ, ಸ್ವಾಮಿ ನಿರಂಜನಾನಂದರು ಎಲ್ಲವನ್ನೂ ಆ ಮಗುವಿಗೆ ಕೊಟ್ಟು ನಡೆದೇ ಬಿಟ್ಟರು. ನಂತರ ಮತ್ತೆ ಮಾರುಕಟ್ಟೆಗೆ ಹೋಗಿ, ಶ್ರೀರಾಮಕೃಷ್ಣರಿಗಾಗಿ ಸಿಹಿತಿಂಡಿಗಳನ್ನು ಖರೀದಿಸಿದರು.

***

ಶ್ರೀರಾಮಕೃಷ್ಣರ ಮತ್ತೊಬ್ಬ ಶಿಷ್ಯರಾದ ಸ್ವಾಮಿ ಯೋಗಾನಂದರು ಬಹಳ ಸ್ಫುರದ್ರೂಪಿ. ಅವರು ಯಾವುದೋ ಒಂದು ಊರಿಗೆ ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಒಂದು ನಿಲ್ದಾಣದಲ್ಲಿ ಸುಂದರಳಾದ ಯುವತಿಯೊಬ್ಬಳು ಹತ್ತಿದಳು. ಸ್ವಾಮಿ ಯೋಗಾನಂದರನ್ನು ನೋಡಿ ಅವಳು ಮೋಹ ಪರವಶಳಾದಳು. "ನನ್ನದೆಲ್ಲವನ್ನೂ ನಿಮ್ಮ ಪಾದಗಳಿಗೆ ಸಮರ್ಪಿಸುವೆ. ದಯವಿಟ್ಟು ನನ್ನನ್ನು ಸ್ವೀಕರಿಸಿ" ಎಂದು ಅಂಗಲಾಚಿದಳು. ಸ್ವಾಮಿಗಳು ಪ್ರತಿಕ್ರಿಯಿಸದಿದ್ದಾಗ, "ನನ್ನ ಮಾತನ್ನು ಕೇಳದಿದ್ದರೆ, ಈಗಲೇ ಅಪಾಯದ ಸರಪಳಿಯನ್ನು ಎಳೆದು ರೈಲುಗಾಡಿಯನ್ನು ನಿಲ್ಲಿಸಿ, ನನ್ನ ಮೇಲೆ ದೌರ್ಜನ್ಯ ನಡೆಸಿದಿರೆಂದು ದೂರು ನೀಡುವೆ" ಎಂದು ಬೆದರಿಸಿದಳು. ಮದ್ಯಪಾನದಿಂದ ಅವಳು ಉನ್ಮತ್ತಳಾಗಿದ್ದಳು. ಅಷ್ಟು ಹೊತ್ತಿಗೆ ಒಂದು ನಿಲ್ದಾಣ ಬಂತು. ತತ್ಕ್ಷಣವೇ ಯೋಗಾನಂದರು ರೈಲಿನಿಂದ ಇಳಿದುಬಿಟ್ಟರು. ಪವಿತ್ರಾತ್ಮರಾದ ಸ್ವಾಮಿ ಯೋಗಾನಂದರನ್ನು ಹೀಗೆ ಕೃಪಾಮಯರಾದ ಶ್ರೀರಾಮಕೃಷ್ಣರು ಕಾಪಾಡಿದರು!